**ದಿನಾಂಕ: 09-04-2010ರಂದು ಅಪರಾಹ್ನ: 03-00ಗಂಟೆಗೆ ಹೇಮಾವತಿ ಸಭಾಂಗಣ, ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ನಡೆದ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ನಡವಳಿಗಳು**

**ಅಧ್ಯಕ್ಷರು: ಶ್ರೀ ಬಿ.ಆರ್.ನೀಲಪ್ಪ**

**ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ**

**ಜಿಲ್ಲಾ ಪಂಚಾಯಿತಿ, ಹಾಸನ.**

ಹಾಜರಿ-06

ಗೈರು ಹಾಜರಿ:01

| ಕ್ರಸಂ | ವಿಷಯ | ಚರ್ಚೆ | ತೀರ್ಮಾನ |
|---|---|---|---|
| | | ಉಪ ಕಾರ್ಯದರ್ಶಿ(ಆಡಳಿತ)ರವರು ಸಭೆಗೆ ಮಾನ್ಯ ಸಮಿತಿ ಅಧ್ಯಕ್ಷರು, ಸದಸ್ಯರು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಸಮಿತಿ ಅಧ್ಯಕ್ಷರನ್ನು ಕೋರಿದರು. | |
| 1 | 2009-10ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 2210-03-103-0-76 (ಯೋಜನೇತರ)ಅಡಿಯಲ್ಲಿ ಉಳಿತಾಯವಾಗುವ ಹಣದಲ್ಲಿ ಔಷಧಿ ಖರೀದಿ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆಡಳಿತ(4)152-ಆರೋಗ್ಯ/2009-10 ದಿನಾಂಕ: 05-04-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಹಾಸನ ಜಿಲ್ಲೆಯ ಆಯುಷ್ ಆಸ್ಪತ್ರೆ/ ಚಿಕಿತ್ಸಾಲಯಗಳಿಗೆ ಆಯುರ್ವೇದ, ಯುನಾನಿ ಮತ್ತು ಹೋಮಿಯೋಪತಿ ಔಷಧಿಗಳನ್ನು ಖರೀದಿಸಲು ಲೆಕ್ಕಶೀರ್ಷಿಕೆ 2210-03-103-0-76ಯೋಜನೇತರ (ಭಾ.ವೈ ಪದ್ಧತಿಗೆ ರಾಸಾಯನಿಕ ವಸ್ತುಗಳ ಖರೀದಿ) ಅಡಿಯಲ್ಲಿ 2009-10ನೇ ಸಾಲಿಗೆ ರೂ.28,98,000.00ಗಳ ಅನುದಾನ ಬಿಡುಗಡೆಯಾಗಿದ್ದು, ಈ ಅನುದಾನದಲ್ಲಿ ರೂ.28,27,217/-ಗಳ ಮೊತ್ತದ ಔಷಧಿಗಳನ್ನು ಖರೀದಿಸಲು ದಿನಾಂಕ: 06-03-2010ರಲ್ಲಿ ಮಂಜೂರಾತಿ ನೀಡಲಾಗಿರುತ್ತದೆ. ಜಿಲ್ಲಾ ಆಯುಷ್ ಅಧಿಕಾರಿಗಳು, ಹಾಸನ ಇವರು 2009-10ನೇ ಸಾಲಿಗೆ ಬಿಡುಗಡೆಯಾದ ರೂ.28,98,000.00ಗಳಲ್ಲಿ ಈವರೆಗೆ ರೂ.25,24,013/-ಗಳು ವೆಚ್ಚವಾಗಿ ರೂ.3,73,987/-ಗಳು ಬಾಕಿ ಉಳಿದಿರುವುದರಿಂದ, ಸದರಿ ಮೊತ್ತದಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಆಯುಷ್ ಆಸ್ಪತ್ರೆ/ ಚಿಕಿತ್ಸಾಲಯಗಳಿಗೆ ಹಾಗೂ ಆರೋಗ್ಯ ಶಿಬಿರಗಳಿಗೆ ಅಗತ್ಯವಿರುವ ಔಷಧಿಗಳನ್ನು ಖರೀದಿಸಲು ಮಂಜೂರಾತಿ ನೀಡುವಂತೆ ಕೋರಿರುವುದನ್ನು ಪರಿಶೀಲಿಸಿ, ವಿಷಯವನ್ನು ಜಿಲ್ಲಾ ಪಂಚಾಯಿತಿ ಸಭೆಗೆ ಮಂಡಿಸುವ ಷರತ್ತಿನ ಮೇಲೆ ಜಿಲ್ಲೆಯ ಆಯುಷ್ ಆಸ್ಪತ್ರೆ/ ಚಿಕಿತ್ಸಾಲಯಗಳಿಗೆ ಹಾಗೂ ಆರೋಗ್ಯ ಶಿಬಿರಗಳಿಗೆ ಅಗತ್ಯವಿರುವ ಔಷಧಿಗಳನ್ನು ಸರ್ಕಾರದ ಚಾಲ್ತಿ ನಿಯಮಗಳನ್ನು ಪಾಲಿಸಿ ಕೇಂದ್ರ ಸರ್ಕಾರಿ ಸ್ವಾಮ್ಯದ ಐಎಂಪಿಸಿಎಲ್ ಉತ್ತರಕಾಂಡ ಇವರಿಂದ ರೂ.3,73,987/-(ರೂಪಾಯಿ ಮೂರು ಲಕ್ಷದ ಎಪ್ಪತ್ತಮೂರು ಸಾವಿರದ ಒಂಭೈನೂರ ಎಂಬತ್ತೇಳು ಮಾತ್ರ)ಗಳ ಮಿತಿಯೊಳಗೆ (ತೆರಿಗೆ ಒಳಗೊಂಡಂತೆ ) ಖರೀದಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿರುತ್ತದೆ. ವಿಷಯವನ್ನು ಸ್ಥಾಯಿ ಸಮಿತಿ ಮುಂದೆ ಮಂಡಿಸಿದೆ. | ಸಭೆಯಲ್ಲಿ ಈ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಆಯುಷ್ ಅಧಿಕಾರಿಗಳು ಕೋರಿರುವಂತೆ ಲೆಕ್ಕಶೀರ್ಷಿಕೆ 2210-03-103-0-76ಯೋಜನೇತರ (ಭಾ.ವೈ ಪದ್ಧತಿಗೆ ರಾಸಾಯನಿಕ ವಸ್ತುಗಳ ಖರೀದಿ) ಅಡಿಯಲ್ಲಿ 2009-10ನೇ ಸಾಲಿಗೆ ಬಿಡುಗಡೆಯಾಗಿರುವ ರೂ.28,98,000.00ಗಳಲ್ಲಿ ಉಳಿಕೆಯಾಗಿರುವ ರೂ.3,73,987/-/-(ರೂಪಾಯಿ ಮೂರು ಲಕ್ಷದ ಎಪ್ಪತ್ತಮೂರು ಸಾವಿರದ ಒಂಭೈನೂರ ಎಂಬತ್ತೇಳು ಮಾತ್ರ)ಗಳ ಮಿತಿಯೊಳಗೆ (ತೆರಿಗೆ ಒಳಗೊಂಡಂತೆ ) ಸಾರ್ವಜನಿಕ ಹಿತದೃಷ್ಟಿಯಿಂದ ಆಯುಷ್ ಆಸ್ಪತ್ರೆ/ ಚಿಕಿತ್ಸಾಲಯಗಳಿಗೆ ಹಾಗೂ ಆರೋಗ್ಯ ಶಿಬಿರಗಳಿಗೆ ಅಗತ್ಯವಿರುವ ಔಷಧಿಗಳನ್ನು ಸರ್ಕಾರದ ಚಾಲ್ತಿ ನಿಯಮಗಳನ್ನು ಪಾಲಿಸಿ ಕೇಂದ್ರ ಸರ್ಕಾರಿ ಸ್ವಾಮ್ಯದ ಐಎಂಪಿಸಿಎಲ್ ಉತ್ತರಕಾಂಡ ಇವರಿಂದ ಖರೀದಿಸಿರುವುದಕ್ಕೆ ಸಭೆಯು ಸರ್ವಾನುಮತದಿಂದ ಘಟನೋತ್ತರ ಮಂಜೂರಾತಿ ನೀಡಿತು. |

| | | | |
|---|---|---|---|
| 2 | ಸರ್ಕಾರಿ ಆಯುರ್ವೇದ ಆಸ್ಪತ್ರೆ, ಹೊಳೆನರಸೀ ಪುರ ಇಲ್ಲಿಗೆ ಪಂಚಕರ್ಮ ಉಪಕರಣ ಖರೀದಿಸುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆಡಳಿತ(4) 204-ಆರೋಗ್ಯ/2009-10 ದಿನಾಂಕ: 05-04-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಹಾಸನ ಜಿಲ್ಲೆಯ ಆಯುಷ್ ಆಸ್ಪತ್ರೆ/ ಚಿಕಿತ್ಸಾಲಯಗಳ ವೇತನೇತರ ಲೆಕ್ಕಶೀರ್ಷಿಕೆ 2210-04-101-1-72( ಯೋಜನೇತರ) (ಭಾರತೀಯ ವೈದ್ಯಪದ್ಧತಿ ಅಡಿಯಲ್ಲಿ ಆಸ್ಪತ್ರೆಗಳು ಮತ್ತು ಚಿಕಿತ್ಸಾಲಯಗಳ ಪ್ರಾರಂಭ ಮತ್ತು ನಿರ್ವಹಣೆ) ಅಡಿಯಲ್ಲಿ 2009-10ನೇ ಸಾಲಿಗೆ ವೇತನೇತರ ಬಾಬ್ತಿಗಾಗಿ ಬಿಡುಗಡೆಯಾದ ರೂ.3,24,000/-ಗಳ ಮೊತ್ತದಲ್ಲಿ ಉಳಿಕೆಯಾಗಿರುವ ಅನುದಾನದಲ್ಲಿ ಆಯುರ್ವೇದ ಚಿಕಿತ್ಸೆಯಲ್ಲಿ ತುಂಬಾ ಜನಪ್ರಿಯವಾಗಿರುವ ಪಂಚಕರ್ಮ ಚಿಕಿತ್ಸಾ ವಿಧಾನಕ್ಕೆ ಅಗತ್ಯವಾದ ಉಪಕರಣಗಳನ್ನು ಸರ್ಕಾರಿ ಆಯುರ್ವೇದ ಆಸ್ಪತ್ರೆ, ಹೊಳೆನರಸೀಪುರ ಇಲ್ಲಿಗೆ ಖರೀದಿಸಲು ದರಪಟ್ಟಿ ಕರೆದು, ದರಪಟ್ಟಿಯಲ್ಲಿ ಕಡಿಮೆ ದರ ಸೂಚಿಸಿರುವ ಮೆ: ಎಸ್ಟೀಮ್ ಸರ್ವಿಸಸ್, ತ್ರಿಚೂರು, ಕೇರಳ ರಾಜ್ಯ ಇವರಿಂದ ಖರೀದಿಸಲು ಮಂಜೂರಾತಿ ನೀಡುವಂತೆ ಜಿಲ್ಲಾ ಆಯುಷ್ ಅಧಿಕಾರಿಗಳು, ಹಾಸನ ಇವರು ಕೋರಿರುವುದನ್ನು ಪರಿಶೀಲಿಸಿ, ವಿಷಯವನ್ನು ಜಿಲ್ಲಾ ಪಂಚಾಯಿತಿ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ಘಟನೋತ್ತರ ಮಂಜೂರಾತಿ ಪಡೆಯುವ ಷರತ್ತಿಗೊಳಪಟ್ಟು ರೂ.67,200/- (ರೂಪಾಯಿ ಅರವತ್ತೇಳು ಸಾವಿರದ ಎರಡು ನೂರು ಮಾತ್ರ) ಗಳ ಮಿತಿಯೊಳಗೆ ಪಂಚಕರ್ಮ ಉಪಕರಣಗಳನ್ನು ಸರ್ಕಾರದ ಚಾಲ್ತಿ ನಿಯಮಗಳನುಸಾರ ಖರೀದಿಸಲು ಮಂಜೂರಾತಿ ನೀಡಲಾಗಿದೆ. ವಿಷಯವನ್ನು ಸ್ಥಾಯಿ ಸಮಿತಿ ಸಭೆಯ ಅನುಮೋದನೆಗೆ ಮಂಡಿಸಿದೆ. | ವಿಷಯದ ಬಗ್ಗೆ ಸಮಗ್ರವಾಗಿ ಪರಿಶೀಲಿಸಲಾಯಿತು.<br>ಜಿಲ್ಲಾ ಆಯುಷ್ ಅಧಿಕಾರಿ, ಹಾಸನ ಇವರು ಕೋರಿರುವಂತೆ ವೇತನೇತರ ಲೆಕ್ಕಶೀರ್ಷಿಕೆ 2210-04-101-1-72( ಯೋಜನೇತರ) (ಭಾರತೀಯ ವೈದ್ಯಪದ್ಧತಿ ಅಡಿಯಲ್ಲಿ ಆಸ್ಪತ್ರೆಗಳು ಮತ್ತು ಚಿಕಿತ್ಸಾಲಯಗಳ ಪ್ರಾರಂಭ ಮತ್ತು ನಿರ್ವಹಣೆ) ಅಡಿಯಲ್ಲಿ 2009-10ನೇ ಸಾಲಿಗೆ ವೇತನೇತರ ಬಾಬ್ತಿ ಗಾಗಿ ಬಿಡುಗಡೆಯಾದ ರೂ.3,24,000/-ಗಳ ಮೊತ್ತದಲ್ಲಿ ಉಳಿಕೆಯಾಗಿರುವ ಅನುದಾನದಲ್ಲಿ ಸರ್ಕಾರಿ ಆಯುಷ್ ಆಸ್ಪತ್ರೆ, ಹೊಳೆನರಸೀಪುರ ಇಲ್ಲಿಗೆ ಪಂಚಕರ್ಮ ಚಿಕಿತ್ಸಾ ಉಪಕರಣಗಳನ್ನು ದರಪಟ್ಟಿಯಲ್ಲಿ ಕಡಿಮೆ ದರ ನಮೂದಿಸಿರುವ ಮೆ: ಎಸ್ಟೀಮ್ ಸರ್ವಿಸಸ್, ತ್ರಿಚೂರ್, ಕೇರಳ ಇವರಿಂದ ರೂ.67,200/- ಗಳ ಮಿತಿಯೊಳಗೆ ಪಂಚಕರ್ಮ ಉಪಕರಣಗಳನ್ನು ಸರ್ಕಾರದ ಚಾಲ್ತಿ ನಿಯಮ ಗಳನುಸಾರ ಖರೀದಿಸಿರುವುದಕ್ಕೆ ಸಭೆಯು ಸರ್ವಾನುಮತದಿಂದ ಘಟನೋತ್ತರ ಮಂಜೂರಾತಿ ನೀಡಿತು |
| 3 | ಸರ್ಕಾರಿ ಆಯುರ್ವೇದ ಆಸ್ಪತ್ರೆ, ಬೇಲೂರು ಇಲ್ಲಿಗೆ ಪಂಚಕರ್ಮ ಉಪಕರಣ ಖರೀದಿಸುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆಡಳಿತ(4) 203-ಆರೋಗ್ಯ/2009-10 ದಿನಾಂಕ: 05-04-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಹಾಸನ ಜಿಲ್ಲೆಯ ಆಯುಷ್ ಆಸ್ಪತ್ರೆ/ ಚಿಕಿತ್ಸಾಲಯಗಳ ಲೆಕ್ಕಶೀರ್ಷಿಕೆ 2210-04-101-1-71 ( ಯೋಜನೇತರ) ಅಡಿಯಲ್ಲಿ 2009-10ನೇ ಸಾಲಿಗೆ ವೇತನೇತರ ಬಾಬ್ತಿಗಾಗಿ ಬಿಡುಗಡೆಯಾದ ರೂ.6,16,000/-ಗಳ ಮೊತ್ತದಲ್ಲಿ ಉಳಿಕೆಯಾಗಿರುವ ರೂ.85,000/-ಗಳಅನುದಾನದಲ್ಲಿ ಆಯುರ್ವೇದ ಚಿಕಿತ್ಸೆಯಲ್ಲಿ ತುಂಬಾ ಜನಪ್ರಿಯವಾಗಿರುವ ಪಂಚಕರ್ಮ ಚಿಕಿತ್ಸಾ ವಿಧಾನಕ್ಕೆ ಅಗತ್ಯವಾದ ಉಪಕರಣಗಳನ್ನು ಸರ್ಕಾರಿ ಆಯುರ್ವೇದ ಆಸ್ಪತ್ರೆ, ಬೇಲೂರು ಇಲ್ಲಿಗೆ ಖರೀದಿಸಲು ಮಂಜೂರಾತಿ ನೀಡುವಂತೆ ಜಿಲ್ಲಾ ಆಯುಷ್ ಅಧಿಕಾರಿಗಳು, ಹಾಸನ ಇವರು ಕೋರಿರುವುದನ್ನು ಪರಿಶೀಲಿಸಿ, ವಿಷಯವನ್ನು ಜಿಲ್ಲಾ ಪಂಚಾಯಿತಿ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ಘಟನೋತ್ತರ | ವಿಷಯದ ಬಗ್ಗೆ ಸಮಗ್ರವಾಗಿ ಪರಿಶೀಲಿಸಲಾಯಿತು.<br>ಜಿಲ್ಲಾ ಆಯುಷ್ ಅಧಿಕಾರಿ, ಹಾಸನ ಇವರು ಕೋರಿರುವಂತೆ ವೇತನೇತರ ಲೆಕ್ಕಶೀರ್ಷಿಕೆ 2210-04-101-1-71( ಯೋಜನೇತರ) ಅಡಿಯಲ್ಲಿ 2009-10ನೇ ಸಾಲಿಗೆ ವೇತನೇತರ ಬಾಬ್ತಿಗಾಗಿ ಬಿಡುಗಡೆ ಯಾದ ರೂ.6,16,000/-ಗಳ ಮೊತ್ತದಲ್ಲಿ ಉಳಿಕೆ ಯಾಗಿರುವ ಅನುದಾನದಲ್ಲಿ ಸರ್ಕಾರಿ ಆಯುಷ್ ಆಸ್ಪತ್ರೆ, ಬೇಲೂರು ಇಲ್ಲಿಗೆ ಪಂಚಕರ್ಮ ಚಿಕಿತ್ಸಾ ಉಪಕರಣ ಗಳನ್ನು ಸರ್ಕಾರದ ಚಾಲ್ತಿ ನಿಯಮಗಳನುಸಾರ |

| | | | |
|---|---|---|---|
| | | ಮಂಜೂರಾತಿ ಪಡೆಯುವ ಷರತ್ತಿಗೊಳಪಟ್ಟು ರೂ.85,000/-(ರೂಪಾಯಿ ಎಂಬತ್ತೈದು ಸಾವಿರ ಮಾತ್ರ) ಗಳ ಮಿತಿಯೊಳಗೆ ಪಂಚಕರ್ಮ ಉಪಕರಣಗಳನ್ನು ಸರ್ಕಾರದ ಚಾಲ್ತಿ ನಿಯಮಗಳನುಸಾರ ಖರೀದಿಸಲು ಮಂಜೂರಾತಿ ನೀಡಲಾಗಿದೆ. ವಿಷಯವನ್ನು ಸ್ಥಾಯಿ ಸಮಿತಿ ಸಭೆಯ ಅನುಮೋದನೆಗೆ ಮಂಡಿಸಿದೆ.<br>ಉಪ ಕಾರ್ಯದರ್ಶಿ(ಆಡಳಿತ)ರವರು ಮಾತನಾಡುತ್ತಾ, ಪಂಚಕರ್ಮ ಚಿಕಿತ್ಸೆಯನ್ನು ಪ್ರಾರಂಭಿಸುವಾಗ ಸಂಬಂಧಪಟ್ಟ ಜಿಲ್ಲಾ ಪಂಚಾಯಿತಿ ಸದಸ್ಯರುಗಳ ಗಮನಕ್ಕೆ ತರಬೇಕೆಂದು ಜಿಲ್ಲಾ ಆಯುಷ್ ಅಧಿಕಾರಿಗಳಿಗೆ ತಿಳಿಸಿದರು. | ಖರೀದಿಸಿರುವುದಕ್ಕೆ ಸಭೆಯು ಸರ್ವಾನುಮತದಿಂದ ಘಟನೋತ್ತರ ಮಂಜೂರಾತಿ ನೀಡಿತು |
| 4 | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರ ಕಛೇರಿಯ ಉಪಯೋಗಕ್ಕೆ ಬೇಕಾಗುವ ಯು.ಪಿ.ಎಸ್ ಮತ್ತು ಸೋಲಾರ್ ಲೈಟ್‌ಗಳನ್ನು ಖರೀದಿಸಲು ಆಡಳಿತಾತ್ಮಕ ಮಂಜೂರಾತಿಯನ್ನು ನೀಡುವ ಬಗ್ಗೆ. | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ತಮ್ಮ ಪತ್ರದಲ್ಲಿ ದಿನಾಂಕ: 11-02-2010ರಂದು ನಡೆದ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿಯಲ್ಲಿ ಅನುಮೋದನೆ ನೀಡಲಾದ ಪ್ರಸ್ತಾವನೆಗಳಿಗೆ ಈ ವರ್ಷದ ಲೆಕ್ಕಶೀರ್ಷಿಕೆಯಲ್ಲಿ ಬಿಡುಗಡೆಯಾಗುವ ಅನುದಾನವನ್ನು ಉಪಯೋಗಿಸಲು ಹಾಗೂ ಆಡಳಿತಾತ್ಮಕ ಮಂಜೂರಾತಿಯನ್ನು ನೀಡುವಂತೆ ಕೋರಿರುತ್ತಾರೆ.<br>1. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಛೇರಿಯ ಉಪಯೋಗಕ್ಕೆ ಬೇಕಾಗುವ ಯು.ಪಿ.ಎಸ್ ಅನ್ನು ಖರೀದಿಸಿ ಸ್ಥಾಪನೆ ಮಾಡಲು ರೂ.98,890/-ಗಳಿಗೆ ಮಂಜೂರಾತಿ<br>2. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಛೇರಿಯ ಆವರಣದಲ್ಲಿ 2 ಸೋಲಾರ್ ಲೈಟ್ ಗಳನ್ನು ಖರೀದಿಸಿ ಸ್ಥಾಪನೆ ಮಾಡಲು ರೂ.0.98ಲಕ್ಷಗಳಿಗೆ ಮಂಜೂರಾತಿ<br>3. ಪ್ರಾಥಮಿಕ ಆರೋಗ್ಯ ಕೇಂದ್ರ ಬಾಣಾವರ ಡೀಸೆಲ್ ಜನರೇಟರನ್ನು ದುರಸ್ಥಿಪಡಿಸಿ ವಾರ್ಡ್‌ಗಳಿಗೆ ವೈರಿಂಗ್ ಮಾಡಲು ರೂ.32,000/- ಗಳಿಗೆ ಮಂಜೂರಾತಿ<br>4. ಬೇಲೂರು ಸಮುದಾಯ ಆರೋಗ್ಯ ಕೇಂದ್ರಕ್ಕೆ ಡೀಸೆಲ್ ಜನರೇಟರನ್ನು ಖರೀದಿಸಲು ರೂ.98000/-ಗಳಿಗೆ ಮಂಜೂರಾತಿ ನೀಡುವ ಬಗ್ಗೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಪರಿಶೀಲಿಸಲಾಯಿತು.<br>ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಕೋರಿರುವಂತೆ<br>1. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಛೇರಿಯ ಉಪಯೋಗಕ್ಕೆ ಬೇಕಾಗುವ ಯು.ಪಿ.ಎಸ್ ಅನ್ನು ಖರೀದಿಸಿ ಸ್ಥಾಪನೆ ಮಾಡಲು ರೂ.98,890/-(ರೂಪಾಯಿ ತೊಂಬತ್ತೆಂಟು ಸಾವಿರದ ಎಂಟು ನೂರ ತೊಂಬತ್ತು ಮಾತ್ರ)ಗಳಿಗೆ ಸಭೆಯು ಸರ್ವಾನುಮತದಿಂದ ಮಂಜೂರಾತಿ ನೀಡಿತು.<br>2. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಛೇರಿಯ ಆವರಣದಲ್ಲಿ 2 ಸೋಲಾರ್ ಲೈಟ್ ಗಳನ್ನು ಡಿ.ಜಿ.ಎಸ್.ಅಂಡ್ ಡಿ ದರದಲ್ಲಿ ಖರೀದಿಸಲು ಸಭೆಯು ಸರ್ವಾನುಮತದಿಂದ ಮಂಜೂರಾತಿ ನೀಡಿತು.<br>3. ಪ್ರಾಥಮಿಕ ಆರೋಗ್ಯ ಕೇಂದ್ರ ಬಾಣಾವರ ಡೀಸೆಲ್ ಜನರೇಟರನ್ನು ದುರಸ್ಥಿಪಡಿಸಿ ವಾರ್ಡ್ ಗಳಿಗೆ ವೈರಿಂಗ್ ಮಾಡಲು ರೂ.32,000/-(ರೂಪಾಯಿ ಮೂವತ್ತೆರಡು ಸಾವಿರ ಮಾತ್ರ) |

| | | | |
|---|---|---|---|
| | | | ಗಳಿಗೆ ಸಭೆಯು ಸರ್ವಾನುಮತದಿಂದ ಮಂಜೂರಾತಿ ನೀಡಿತು.<br>4. ಬೇಲೂರು ಸಮುದಾಯ ಆರೋಗ್ಯ ಕೇಂದ್ರಕ್ಕೆ ಡೀಸೆಲ್ ಜನರೇಟರನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 99 ನಿಯಮ 2000ರಂತೆ ನಿಯಮಾನುಸಾರ ಖರೀದಿಸಲು ಸಭೆಯು ಸರ್ವಾನುಮತದಿಂದ ಮಂಜೂರಾತಿ ನೀಡಿತು. |
| 5 | 2010-11ನೇ ಸಾಲಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಮಾರಾಟ ಪಠ್ಯ ಪುಸ್ತಕಗಳನ್ನು ಒದಗಿಸುವ ಬಗ್ಗೆ. | ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಇವರು 2010-11ನೇ ಸಾಲಿಗೆ ಜಿಲ್ಲೆಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಮಾರಾಟ ಪಠ್ಯಪುಸ್ತಕಗಳನ್ನು ಒದಗಿಸಲು ಅಗತ್ಯವಿರುವ ಮಾರಾಟ ಪಠ್ಯ ಪುಸ್ತಕಗಳ ಬೇಡಿಕೆಯನ್ನು ಆಯಾಯ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಡಿ.ಡಿ.ಗಳೊಂದಿಗೆ ಸಲ್ಲಿಸಲು ತಿಳಿಸಲಾಗಿದೆ. ಆದರೆ, ಈಗಾಗಲೆ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಪ್ರಾಂಶುಪಾಲರು ಆಯಾಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಬೇಡಿಕೆ ಪಟ್ಟಿಯನ್ನು ಈಗಾಗಲೇ ಸಲ್ಲಿಸಿರುತ್ತಾರೆ. ಇದಕ್ಕೆ ತಗಲುವ ಹಣವನ್ನು ಭರಿಸಲು 2009-10ರ ಆರ್ಥಿಕ ವರ್ಷ ಮುಕ್ತಾಯಗೊಂಡಿದ್ದು, ಅನುದಾನವಿಲ್ಲದೇ ಇರುವುದರಿಂದ, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಯಿಂದ ಬೇಡಿಕೆಗನುಗುಣವಾಗಿ ಆಯಾ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಮಾರಾಟ ಪಠ್ಯ ಪುಸ್ತಕಗಳನ್ನು ಸರಬರಾಜು ಮಾಡಿ ಬಿಲ್ಲನ್ನು ಆಯಾ ಶಾಲೆಗಳ ಮುಖ್ಯಸ್ಥರಿಗೆ ನೀಡುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಯವರಿಗೆ ತಿಳಿಸುವಂತೆ ಕೋರಿರುತ್ತಾರೆ ಮತ್ತು ಇದರ ವೆಚ್ಚವನ್ನು ಏಪ್ರಿಲ್/ಮೇ 2010ರ ಮಾಹೆಯಲ್ಲಿ ಬಿಡುಗಡೆಯಾಗುವ 2010-11ರ ಅನುದಾನದಲ್ಲಿ ಭರಿಸಿ ಡಿ.ಡಿ. ಮೂಲಕ ಸಲ್ಲಿಸಲಾಗುವುದೆಂದು ತಿಳಿಸಿರುತ್ತಾರೆ. | ವಿಷಯದ ಬಗ್ಗೆ ಸಭೆಯಲ್ಲಿ ಸಮಗ್ರವಾಗಿ ಚರ್ಚಿಸಲಾಯಿತು.<br>ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ನಡೆಯುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಹಿತದೃಷ್ಟಯಿಂದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಂದ ಸಲ್ಲಿಸಿರುವ ಬೇಡಿಕೆಗನುಗುಣವಾಗಿ ಪಠ್ಯ ಪುಸ್ತಕಗಳನ್ನು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಸರಬರಾಜು ಮಾಡುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಯವರಿಗೆ ತಿಳಿಸಲಾಯಿತು ಮತ್ತು ಈ ಸಂಬಂದ ತಗಲುವ ವೆಚ್ಚವನ್ನು ಏಪ್ರಿಲ್/ಮೇ 2010ರ ಮಾಹೆಯಲ್ಲಿ ಬಿಡುಗಡೆಯಾಗುವ 2010-11ರ ಅನುದಾನದಲ್ಲಿ ಭರಿಸಿ ಡಿ.ಡಿ. ಮೂಲಕ ಸಲ್ಲಿಸಲು ಕ್ರಮ ಕೈಗೊಳ್ಳುವಂತೆ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ/ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಇವರಿಗೆ ಸೂಚಿಸಲಾಯಿತು. |

| | | | |
|---|---|---|---|
| | | ಮುಖ್ಯ ಯೋಜನಾಧಿಕಾರಿಯವರು 2010-11ನೇ ಸಾಲಿಗೆ ಲಿಂಕ್ ಡಾಕ್ಯುಮೆಂಟನಲ್ಲಿ ನಿಗದಿಪಡಿಸಿರುವ ಅನುದಾನದ ವಿವರಗಳನ್ನು ಸಭೆಯ ಗಮನಕ್ಕೆ ತಂದರು ಮತ್ತು ಶಿಕ್ಷಣ ಆರೋಗ್ಯ ಸ್ಥಾಯಿ ಸಮಿತಿ ಸಭೆಗೆ ಒಳಪಡುವ ಇಲಾಖೆಗಳು ವಿವಿಧ ಯೋಜನೆಗಳಿಗೆ ನಿಗದಿಪಡಿಸಿರುವ ಅನುದಾನಕ್ಕೆ ಸಂಬಂಧಿಸಿದಂತೆ, ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿ ಮುಂದಿನ ಸ್ಥಾಯಿ ಸಮಿತಿ ಸಭೆಗೆ ಅನುಮೋದನೆಗೆ ಮಂಡಿಸಲು ಅಗತ್ಯ ಕ್ರಮ ವಹಿಸಬೇಕೆಂದು ಇಲಾಖಾ ಮುಖ್ಯಸ್ಥರುಗಳಿಗೆ ತಿಳಿಸಿದರು.<br>ಮಾನ್ಯ ಸದಸ್ಯರಾದ ಶ್ರೀ ಹೆಚ್.ಎಸ್.ಶಂಕರ್‌ರವರು ಮಾತನಾಡುತ್ತಾ, ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರನ್ನು ಸರಬರಾಜು ಮಾಡುವ ಬಗ್ಗೆ ಜಿಲ್ಲಾ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ರೂ.9.98ಕೋಟಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿರುತ್ತದೆ. ಈಗ ಬೇಸಿಗೆ ಸಮಯವಾಗಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿರುತ್ತದೆ. ಆದರೆ, ಕಾರ್ಯಪಾಲಕ ಅಭಿಯಂತರರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಇವರು ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಯಾವುದೇ ಕ್ರಮ ವಹಿಸಿರುವುದಿಲ್ಲ. ಆದ್ದರಿಂದ, ಜಿಲ್ಲಾ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಅನುಮೋದನೆಯಾಗಿರುವ ಕ್ರಿಯಾ ಯೋಜನೆಯನ್ವಯ ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರಿನ ಯೋಜನೆಗಳನ್ನು ಕ್ಷಿಪ್ರಗತಿಯಲ್ಲಿ ಅನುಷ್ಟಾನ ಮಾಡಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಅಗತ್ಯ ಕ್ರಮ ವಹಿಸಬೇಕೆಂದು ಕೋರಿದರು.<br>ಮಾನ್ಯ ಸಮಿತಿ ಅಧ್ಯಕ್ಷರು ಮಾತನಾಡುತ್ತಾ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಷಯದ ಬಗ್ಗೆ ಆದ್ಯತೆ ನೀಡಿ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಾರದಂತೆ ಅನುಮೋದಿತ ಕ್ರಿಯಾ ಯೋಜನೆಯನ್ವಯ ಕಾಮಗಾರಿಗಳನ್ನು ಅನುಷ್ಟಾನ ಮಾಡುವಂತೆ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಮತ್ತು ಚನ್ನರಾಯಪಟ್ಟಣ ಇವರಿಗೆ ತಿಳಿಸಿದರು.<br>ಮಾನ್ಯ ಸದಸ್ಯರಾದ ಶ್ರೀ ಸಿ.ಎಸ್.ಪ್ರಕಾಶ್ ರವರು ಮಾತನಾಡುತ್ತಾ, ಬೇಲೂರು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಜನರೇಟರ್ ಸೌಲಭ್ಯವಿಲ್ಲದೆ ರೋಗಿಗಳಿಗೆ ಮತ್ತು ಸಿಬ್ಬಂದಿಯವರಿಗೆ ಬಹಳ ತೊಂದರೆಯಾಗಿರುತ್ತದೆ. ಆದ್ದರಿಂದ, ತ್ವರಿತವಾಗಿ ಜನರೇಟರನ್ನು ಖರೀದಿಸಿ ನೀಡಬೇಕೆಂದು ಕೋರಿದರು. | ಮಾನ್ಯ ಸಮಿತಿ ಅಧ್ಯಕ್ಷರು ಮಾತನಾಡುತ್ತಾ, ಸಮಿತಿ ಸದಸ್ಯರುಗಳು ಪ್ರಸ್ತಾಪಿಸಿರುವ ವಿಷಯಗಳ ಬಗ್ಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಮತ್ತು ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಹಾಸನ ಇವರು ಅಗತ್ಯ ಕ್ರಮ ವಹಿಸಬೇಕೆಂದು ತಿಳಿಸಿದರು. |

ಮಾನ್ಯ ಸದಸ್ಯರಾದ ಶ್ರೀ ಹೆಚ್.ಎಸ್.ಶಂಕರ್‌ರವರು ಮಾತನಾಡುತ್ತಾ, ಕೇರಳಾಪುರ ಪ್ರಾಥಮಿಕ ಆರೋಗ್ಯ ಕೇಂದ್ರವು ಅರಕಲಗೂಡು ತಾಲ್ಲೂಕಿನ ಗಡಿಯಲ್ಲಿದ್ದು, ಅಲ್ಲಿಂದ ತಾಲ್ಲೂಕು ಕೇಂದ್ರ ಅಥವಾ ಜಿಲ್ಲಾ ಕೇಂದ್ರಗಳಿಗೆ ರೋಗಿಗಳು ಬಂದು ಎಕ್ಸರೇ ಮಾಡಿಸಿಕೊಳ್ಳಲು ಬಹಳ ಹಣ ಬೇಕಾಗುತ್ತದೆ. ಅಲ್ಲದೆ, ಸದರಿ ಆಸ್ಪತ್ರೆಗೆ ಬರುವ ರೋಗಿಗಳೆಲ್ಲರೂ ಗ್ರಾಮೀಣ ಪ್ರದೇಶದವರಾಗಿದ್ದು, ಕಡುಬಡವರಾಗಿರುತ್ತಾರೆ. ಆದ್ದರಿಂದ, ಸಾರ್ವಜನಿಕರ ಹಿತದೃಷ್ಟಿಯಿಂದ ಕೇರಳಾಪುರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಎಕ್ಸರೇ ಯಂತ್ರವನ್ನು ಅಳವಡಿಸುವಂತೆ ಹಿಂದಿನಿಂದಲೂ ಒತ್ತಾಯ ಮಾಡಲಾಗುತ್ತಿದೆ. ಆದರೆ ಈವರೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲವೆಂದು ಆಕ್ಷೇಪ ವ್ಯಕ್ತಪಡಿಸಿದರು.

ಮುಂದುವರೆದು, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಗ್ರೂಪ್ -ಡಿ ನೌಕರರು ಕುಡಿದುಕೊಂಡು ಬಂದು ಕೆಲಸ ನಿರ್ವಹಿಸುತ್ತಿದ್ದಾರೆ. ಇದರಿಂದ, 24 ಗಂಟೆಯು ಸೇವೆ ನೀಡುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮಹಿಳಾ ಸಿಬ್ಬಂದಿ ಮತ್ತು ರೋಗಿಗಳಿಗೆ ಬಹಳ ತೊಂದರೆಯಾಗಿರುತ್ತದೆ. ಆದ್ದರಿಂದ, ಕುಡಿದುಕೊಂಡು ಬಂದು ಕೆಲಸ ನಿರ್ವಹಿಸುತ್ತಿರುವ ಗ್ರೂಪ್-ಡಿ ನೌಕರರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿದರು. ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳಲ್ಲಿ ಎನ್.ಎಂ.ಆರ್.ಅಡಿಯಲ್ಲಿ 86 ಗ್ರೂಪ್-ಡಿ ನೌಕರರು ಕೆಲಸವಿಲ್ಲದೆ ಹಾಗೆಯೇ ಇದ್ದಾರೆ. ಇವರನ್ನು ಬೇರೆ ಇಲಾಖೆಗಳಿಗೆ ನಿಯೋಜನೆ ಮಾಡುವ ಬಗ್ಗೆ ಹಲವಾರು ಬಾರಿ ಕಾರ್ಯಪಾಲಕ ಅಭಿಯಂತರರುಗಳಿಗೆ ಕೋರಿದ್ದರೂ ಸಹ ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದ್ದರಿಂದ, ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿದರು.

ಮಾನ್ಯ ಸದಸ್ಯರಾದ ಶ್ರೀ ಸಿ.ಎಸ್.ಪ್ರಕಾಶ್‌ರವರು ಮಾತನಾಡುತ್ತಾ, ಬೇಲೂರು ಸಮುದಾಯ ಆರೋಗ್ಯ ಕೇಂದ್ರದ ಶವಾಗಾರ ತುಂಬಾ ದುಸ್ಥಿತಿಯಲ್ಲಿದ್ದು, ಸದರಿ ಕಟ್ಟಡವನ್ನು ದುರಸ್ಥಿಪಡಿಸಲು ಕ್ರಮ ವಹಿಸಬೇಕೆಂದು ತಿಳಿಸಿದರು.

ಮುಂದುವರೆದು, ಕೆಲವು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಆರೋಗ್ಯ ರಕ್ಷಾ ಸಮಿತಿ ಸಭೆಗೆ ಜಿಲ್ಲಾ ಪಂಚಾಯಿತಿ ಸದಸ್ಯರುಗಳನ್ನು ಆಹ್ವಾನಿಸುತ್ತಿಲ್ಲ . ಈ ಬಗ್ಗೆ ಪರಿಶೀಲಿಸಿ ಕ್ರಮ ವಹಿಸಬೇಕೆಂದು ಕೋರಿದರು ಮತ್ತು ಕೆಲವು ಆರೋಗ್ಯ ರಕ್ಷಾ ಸಮಿತಿಗೆ ಬಿಡುಗಡೆಯಾಗಿರುವ ಅನುದಾನವನ್ನು ಯಾವ ರೀತಿ ವಿನಿಯೋಗ ಮಾಡಬೇಕೆಂಬ ಬಗ್ಗೆ ಸಿಬ್ಬಂದಿಗಳಿಗೆ ಮಾಹಿತಿಯಿರುವುದಿಲ್ಲ. ಇದರಿಂದ,

| | | | |
|---|---|---|---|
| | | ಬಿಡುಗಡೆಯಾಗಿರುವ ಅನುದಾನವನ್ನು ವಿನಿಯೋಗಿಸಿರುವುದಿಲ್ಲ. ಆದ್ದರಿಂದ, ಈ ಬಗ್ಗೆಯೂ ಸಹ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿದರು.<br>ಮಾನ್ಯ ಸದಸ್ಯರಾದ ಶ್ರೀ ರಾಮೇಗೌಡರವರು ಹಳೇಕೋಟೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸೋಲಾರ್ ಲೈಟ್‌ಗಳನ್ನು ಅಳವಡಿಸಲು ಕ್ರಮ ವಹಿಸಬೇಕೆಂದು ಕೋರಿದರು.<br>ಮಾನ್ಯ ಸದಸ್ಯರಾದ ಶ್ರೀ ಹೆಚ್.ಎಸ್.ಶಂಕರ್‌ರವರು ಮಾತನಾಡುತ್ತಾ, 2010-11ನೇ ಸಾಲಿನಲ್ಲಿ ಸರ್ಕಾರಿ/ಅನುದಾನಿತ ಶಾಲಾ ಮಕ್ಕಳಿಗೆ ಮದ್ಯಾಹ್ನದ ಊಟ ನೀಡುವುದನ್ನು ಮಠಗಳಿಗೆ ವಹಿಸಬಾರದೆಂದು ಕೋರಿದರು. ಹನ್ಯಾಳು ಪ್ರೌಢಶಾಲೆಗೆ ನೀರಾವರಿ ಇಲಾಖೆಯಿಂದ ಗ್ರೂಪ್-ಡಿ ನೌಕರರನ್ನು ನಿಯೋಜನೆ ಮಾಡಿದ್ದು, ಸದರಿ ನೌಕರರು ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿಲ್ಲ. ಈ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಬೇಕೆಂದು ಕೋರಿದರು. ಸೈಕಲ್‌ಗಳನ್ನು ಎಲ್ಲಾ ಮಕ್ಕಳಿಗೂ ನೀಡಲು ಕ್ರಮ ವಹಿಸಬೇಕೆಂದು ಕೋರಿದರು.<br>ಮುಂದಿನ ಸಭೆಗೆ ಸಹಾಯಕ ನಿರ್ದೇಶಕರು, ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯಿವರು ಕುಸ್ತಿಪಟುಗಳಿಗೆ ಮಾಸಾಶನ ನೀಡಿರುವ ಬಗ್ಗೆ ಫಲಾನುಭವಿಗಳ ಪಟ್ಟಿಯನ್ನು ಸಲ್ಲಿಸುವಂತೆ ತಿಳಿಸಲಾಯಿತು. | |



ಬಿ.ಆರ್.ನೀಲಪ್ಪ
(ಬಿ.ಆರ್.ನೀಲಪ್ಪ)
ಅಧ್ಯಕ್ಷರು
ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ
ಜಿಲ್ಲಾ ಪಂಚಾಯಿತಿ, ಹಾಸನ.